**ಕರ್ನಾಟಕ ಸರ್ಕಾರ**

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ:ಸಿ5(3) ಕಛೇರಿ ಸ್ವಚ್ಚತೆ ಭದ್ರತೆ ಟೆಂಡರ್ 6/2013–14 ದಿನಾಂಕ:25–5–2013

"ತಿದ್ದುಪಡಿ ಪತ್ರ"

ವಿಷಯ: ಕಛೇರಿಯ ಸ್ವಚ್ಚತೆ, ಭದ್ರತೆ, ಎಲೆಕ್ಟ್ರಿಷಿಯನ್ ಕೆಲಸಗಳ ಟೆಂಡರ್–ಪ್ರೀ–ಬಿಡ್ ಸಭೆಯ ಆಕ್ಷೇಪಣೆಗಳ ತಿದ್ದುಪಡಿಗಳ ಬಗ್ಗೆ.

ಉಲ್ಲೇಖ: ದಿನಾಂಕ:23–5–2013ರ ಪ್ರೀ–ಬಿಡ್ ಸಭೆ.

ದಿನಾಂಕ:15–5–2013ರ ಈ ಕಛೇರಿಯ ಟೆಂಡರ್ ಪ್ರಕಟಣೆಯಂತೆ, ದಿನಾಂಕ:23–5–2013ರಂದು ನಡೆದ ಪ್ರೀ–ಬಿಡ್ ಸಭೆಯಯಲ್ಲಿ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ವಿಚಾರಗಳ ಬಗ್ಗೆ ವ್ಯಕ್ತವಾದ ಆಕ್ಷೇಪಣೆಗಳಿಗೆ ಈ ಕೆಳಕಂಡಂತೆ ಪರಿಷ್ಕರಣೆ ಮಾಡಲಾಗಿದೆ.

| ಕ್ರಸಂ | ಸಂಸ್ಥೆಗಳ ಪ್ರತಿನಿಧಿಗಳ ಆಕ್ಷೇಪಣೆ | ಆಕ್ಷೇಪಿಸಿರುವ ಅಂಶಗಳಿಗೆ ಮಾಡಬಹುದಾದ ತಿದ್ದುಪಡಿ |
|---|---|---|
| 1 | 2 | 3 |
| 1. | ಬಿಡ್ ಭದ್ರತಾ ಠೇವಣಿ ರೂ.30,000–00 ದಲ್ಲಿ ರೂ.5,000–00ವನ್ನು ಆನ್‌ಲೈನ್ ಮೂಲಕ ಇ–ಆಡಳಿತ ಇಲಾಖೆಗೆ ಸಲ್ಲಿಸಲು ಹಾಗೂ ಉಳಿದ ರೂ.25,000–00 ಮೊತ್ತವನ್ನು ಡಿ.ಡಿ ಮೂಲಕ ಆಯುಕ್ತರ ಕಛೇರಿಗೆ ಸಲ್ಲಿಸಲು ತಿಳಿಸಿದೆ. ರೂ.25,000–00 ಡಿ.ಡಿ ಯನ್ನು ಯಾವ ದಿನಾಂಕಕ್ಕೆ ಸಲ್ಲಿಸಬೇಕು | "ರೂ.25,000–00 ಭದ್ರತಾ ಠೇವಣಿ ಡಿ.ಡಿ ಯನ್ನು ಬಿಡ್ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ:13–6–2013ರ ಸಂಜೆ 5.00ರೊಳಗೆ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು-1 ರವರಿಗೆ ಸಲ್ಲಿಸುವುದು." |
| 2. | ಟೆಂಡರ್ ಡಾಕ್ಯುಮೆಂಟ್‌ನ ವಿಭಾಗ–3ರ ಸಂಖ್ಯೆ 1.14ರಲ್ಲಿ, ಸೆಕ್ಯುರಿಟಿ ಗಾರ್ಡ್‌ಗೆ ಸೂಚಿಸಿರುವ ಮೊತ್ತ ಒಟ್ಟು ಮೊತ್ತವೇ/ನಿವ್ವಳ ಮೊತ್ತವೇ ಎಂಬ ಬಗ್ಗೆ ಸ್ಪಷ್ಟೀಕರಣ. | "ಸೆಕ್ಯುರಿಟಿ ಗಾರ್ಡ್‌ಗೆ ಸೂಚಿಸಿರುವ ಮೊತ್ತ ರೂ.4460.00 ಕಾರ್ಮಿಕ ಇಲಾಖೆಯ ನಿಯಮಗಳನುಸಾರ ಮೂಲ ವೇತನವಾಗಿದ್ದು, ವಿ.ಡಿ.ಎ ಸೇರಿ ರೂ.5817–00 ಆಗುತ್ತದೆ. ಉಳಿದ ಸೇವೆಗಳಿಗೆ ಸೂಚಿಸಿರುವ ಮೊತ್ತ ಮೂಲ ವೇತನ ಮತ್ತು ವಿ.ಡಿ.ಎ ಒಳಗೊಂಡಿರುತ್ತದೆ." |
| 3. | ವಿಭಾಗ–3ರ ವಿಶೇಷ ನಿಬಂಧನೆಗಳ ಕ್ರ.ಸಂ 2.2 ಮತ್ತು 2.3ರಂತೆ ಸೆಕ್ಯುರಿಟಿ ಗಾರ್ಡ್‌ಗಳ ನೇಮಕದ ಬಗ್ಗೆ ಸ್ಪಷ್ಟೀಕರಣ. | "ಸದರಿ ಕಂಡಿಕೆಗಳಲ್ಲಿ ತಿಳಿಸಿರುವಂತೆ, ದಿನದ 24 ಗಂಟೆಗಳ ಕರ್ತವ್ಯ ನಿರ್ವಹಣೆಗೆ ಕಾರ್ಮಿಕ ಇಲಾಖೆಯ ನಿಯಮದಂತೆ ಒಬ್ಬ ನೌಕರನ 8 ಗಂಟೆ ಪಾಳಿಯ ಕಾರ್ಯ ನಿರ್ವಹಣೆಗೆ ತಕ್ಕಂತೆ ಸಿಬ್ಬಂದಿ ಅಗತ್ಯತೆ ಬಗ್ಗೆ ಕ್ರಮ ವಹಿಸಲಾಗುವುದು." |
| 4. | ವಿಭಾಗ–3ರ ವಿಶೇಷ ನಿಬಂಧನೆಗಳ ಆ] ಸ್ವಚ್ಚತೆ ಕೆಲಸಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆ ಸೂಚಿಸುವಂತೆ ಕೋರಿರುತ್ತಾರೆ. | "ಟೆಂಡರ್ ಸಲ್ಲಿಸುವ ಸಂಸ್ಥೆಗಳು ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ದರಗಳನ್ನು ಅನ್ವಯಿಸಿ, ಒಂದು ಸಿಬ್ಬಂದಿಗೆ ದರ ಸಲ್ಲಿಸುವುದು. ಅದರ ಆಧಾರದ ಮೇಲೆ ಈ |

| | | |
|---|---|---|
| | | ಕಛೇರಿಗೆ ಅವಶ್ಯವಿರುವ ಸಿಬ್ಬಂದಿ ಸಂಖ್ಯೆಯನ್ನು ನಿರ್ಧರಿಸ ಲಾಗುವುದು." ಎಲೆಕ್ಟ್ರಿಷಿಯನ್ ಕಛೇರಿ ವೇಳೆಯಲ್ಲಿ ಮಾತ್ರ ಕರ್ತವ್ಯ ನಿರ್ವಹಿಸುವುದು. |
| 5. | ಎಲೆಕ್ಟ್ರಿಷಿಯನ್ ಸಿಬ್ಬಂದಿಯ ವಿದ್ಯಾರ್ಹತೆಯ ಬಗ್ಗೆ ಸ್ಪಷ್ಟೀಕರಣ | "ಟೆಂಡರ್ ಸಲ್ಲಿಸುವ ಸಂಸ್ಥೆಗಳು ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ದರಗಳನ್ನು ಅನ್ವಯಿಸಿ, ಎಲೆಕ್ಟ್ರಿಕಲ್ ಕೆಲಸದಲ್ಲಿ ನುರಿತ ಅಭ್ಯರ್ಥಿಯನ್ನು ನೇಮಿಸಲು ಬದ್ಧವಾಗಿರಬೇಕು." |
| 6. | ಟೆಂಡರ್‌ನಲ್ಲಿ ಭಾಗವಹಿಸುವವರು ಸೂಚಿಸಿರುವ ಮೂರು ಕೆಲಸಗಳಿಗೆ ಕಡ್ಡಾಯವಾಗಿ ದರಪಟ್ಟಿ ಸಲ್ಲಿಸಬೇಕೆ / ಒಂದೊಂದು ಕಾರ್ಯಕ್ಕೆ ಮಾತ್ರ ಸಲ್ಲಿಸಬೇಕೆ ಎಂಬ ಬಗ್ಗೆ ಸ್ಪಷ್ಟೀಕರಣ | ಟೆಂಡರ್‌ನಲ್ಲಿ ಸೂಚಿಸಿರುವ ಮೂರು ಕಾರ್ಯಗಳಿಗೆ ಬಿಡ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ದರಗಳ ಆಧಾರದ ಮೇಲೆ ಒಂದು ಕೆಲಸಕ್ಕೆ / ಎಲ್ಲಾ ಕೆಲಸಗಳಿಗೆ ಕಾರ್ಯಾದೇಶ ನೀಡುವ ಅಧಿಕಾರ ಆಯುಕ್ತರದ್ದಾಗಿರುತ್ತದೆ. |

[ಕರಡು ಪ್ರತಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]

[ಎಸ್.ಎಂ.ಶಾಂತರಾಜು]
ಅಪರ ಆಯುಕ್ತರು [ಆಡಳಿತ] [ಹೆ.ಪ್ರ]
28/5/13